**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ**

ಸಿ.ಸಿ. ನಂ.124/2026

| | | |
|---|---|---|
| ಸಾಕ್ಷಿದಾರರ ಹೆಸರು | ಡಾಃ ಮಹೇಂದ್ರ ಕೆ | ಸಿ.ಡಬ್ಲ್ಯು-8 |
| ತಂದೆಯ ಹೆಸರು | ಶೀನಾ | ಪಿ .ಡಬ್ಲ್ಯೂ-4 |
| ವಯಸ್ಸು | 37 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ತಜ್ಞ ವೈದ್ಯರು, ಉಪ ವಿಭಾಗೀಯ ಆಸ್ಪತ್ರೆ, ಸಾಗರ | ದಿನಾಂಕಃ |
| ವಾಸಃ | ಸಾಗರ | 17.06.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ನಾನು 11.06.2021 ರಿಂದ ಈವರೆಗೆ ನಾನು ಸಾಗರದ ಉಪ ವಿಭಾಗೀಯ ಆಸ್ಪತ್ರೆಯಲ್ಲಿ ತಜ್ಞ ವೈದ್ಯರು ಎಂದು ಸೇವೆ ಸಲ್ಲಿಸುತ್ತಿದ್ದೇನೆ.

**2.** ದಿನಾಂಕ 18.10.2023 ರಂದು ಮಧ್ಯಾಹ್ನ 01.10 ಗಂಟೆಗೆ ನಮ್ಮ ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕಕ್ಕೆ ಚಾ.ಸಾ 1 ಮತ್ತು 2 ರವರು ಹಲ್ಲೆಯ ಹಿನ್ನಲೆಯಲ್ಲಿ ಗಾಯಗೊಂಡು ಚಿಕಿತ್ಸೆಗಾಗಿ ಬಂದಿದ್ದರು. ಸದರಿಯವರನ್ನು ನಾನು ಹೊರರೋಗಿಯಾಗಿ ದಾಖಲಿಸಿಕೊಂಡು ಚಿಕಿತ್ಸೆ ನೀಡಿದ್ದೇನೆ. ಅವರನ್ನು ನಾನು ಪರಿಶೀಲಿಸಿದಾಗ ಚಾ.ಸಾ 1 ರವರ ಎಡಗೈನ ಮೇಲೆ 1x 1 cm ಅಳತೆಯ ತರಿಚಿದ ಗಾಯವಾಗಿತ್ತು. ಸದರಿ ಕಾಲಕ್ಕೆ ಅವರು 7 ತಿಂಗಳ ಗರ್ಭಿಣಿಯಾಗಿದ್ದರು. ಚಾ.ಸಾ 2 ರವರ ಎಡಗೈನಲ್ಲಿ 1x 2 cm ಅಳತೆಯ ತರಿಚಿದ ಗಾಯವಾಗಿತ್ತು. ನನ್ನ ಅಭಿಪ್ರಾಯದಲ್ಲಿ ಚಾ.ಸಾ 1 ಮತ್ತು 2 ರವರಿಗೆ ಆಗಿದ್ದಂತಹ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದವು. ಈ ಕುರಿತು ನಾನು ಗಾಯದ ಪ್ರಮಾಣ ಪತ್ರಗಳನ್ನು ನೀಡಿದ್ದೇನೆ. ಸದರಿ ಗಾಯದ ಪ್ರಮಾಣ ಪತ್ರಗಳನ್ನು ನಿಪಿ-8 ಮತ್ತು ನಿಪಿ-9 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-8(ಎ) ಮತ್ತು ನಿಪಿ-9(ಎ) ಎಂದು ಗುರುತಿಸಲಾಯಿತು. ನಿಪಿ-8 ಮತ್ತು 9 ರಲ್ಲಿ ಕಂಡ ಗಾಯಗಳು ಒಬ್ಬ ವ್ಯಕ್ತಿಯನ್ನು ಜೋರಾಗಿ ತಳ್ಳಿದಾಗ ಅವರು ಗಟ್ಟಿಯಾದ ವಸ್ತುವಿನ ಮೇಲೆ ಬೀಳಿಸಿದರೆ ಆಗುವಂತಹ ಸಾಧ್ಯತೆ ಇದೆ.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ.ಎಂ.ಆರ್.ಎಸ್ ರವರಿಂದಃ–**

**1.** ನಾನು ಮಕ್ಕಳ ವಿಭಾಗದಲ್ಲಿ ಹಿರಿಯ ತಜ್ಞರಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಗಾಯಾಳುವಿನೊಂದಿಗೆ ಯಾರೇ ಬಂದರು ಅವರ ಹೆಸರನ್ನು ಸಾಮಾನ್ಯವಾಗಿ ಗಾಯದ ಪ್ರಮಾಣ ಪತ್ರದಲ್ಲಿ ನಾವು ನಮೂದು ಮಾಡುತ್ತೇವೆ. ನಿಪಿ–8 ಮತ್ತು 9 ರಲ್ಲಿ ಗಾಯಾಳುಗಳು ಸ್ವತಃ ಬಂದಿದ್ದರು ಎಂದು ನಮೂದು ಮಾಡಿದ್ದೇನೆ ಎಂದರೆ ಸರಿ. ನಿಪಿ–8 ಮತ್ತು 9 ರಲ್ಲಿ ಗಾಯದ ಅವಧಿಯನ್ನು ನಮೂದು ಮಾಡಿಲ್ಲ. ಚಾ.ಸಾ 1 ಮತ್ತು 2 ರವರಿಗೆ ಆಗಿದ್ದ ಗಾಯಗಳನ್ನು ನಾನು ಖುದ್ದಾಗಿ ನೋಡಿ ನಿಪಿ–8 ಮತ್ತು 9 ರ ದಾಖಲೆಗಳನ್ನು ನೀಡಿದ್ದೇನೆ. ನಿಪಿ–8 ರಲ್ಲಿ ಚಾ.ಸಾ 1 ರವರ ಎಡಗೈನ ಮೇಲೆ ತರಚಿದ ಗಾಯ ಆಗಿತ್ತು ಎಂದಷ್ಟೆ ಬರೆದಿದ್ದೇನೆ ಎಂದರೆ ಸರಿ. ನಿಪಿ–8 ಮತ್ತು 9 ರಲ್ಲಿ ಕಂಡ ಗಾಯಗಳನ್ನು ಒಬ್ಬ ವ್ಯಕ್ತಿ ಸ್ವತಃ ಮಾಡಿಕೊಳ್ಳಲುಬಹುದು ಎಂದರೆ ಸರಿ. ಚಾ.ಸಾ 2 ರವರು ನಿಪಿ–9 ರಲ್ಲಿ ಕಂಡ ಗಾಯಗಳನ್ನು ಹೊರತು ಪಡಿಸಿ ಬೇರೆ ಗಾಯಗಳನ್ನು ತೋರಿಸಿಲ್ಲ. ನಿಪಿ–8 ಅನ್ನು ನೀಡುವಾಗ gynecologist ರವರ ವರದಿಯನ್ನು ಪಡೆದುಕೊಂಡಿಲ್ಲ. ಚಾ.ಸಾ 1 ಮತ್ತು 2 ರವರಿಗೆ ಯಾವುದೇ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ಚಾ.ಸಾ 1 ಮತ್ತು 2 ರವರು ಸ್ವಯಂಕೃತವಾಗಿ ಗಾಯಗಳನ್ನು ಮಾಡಿಕೊಂಡು ಬಂದಿದ್ದರಿಂದ ಅವರ ಪ್ರಭಾವಕ್ಕೆ ಒಳಗಾಗಿ ನಾನು ನಿಪಿ–8 ಮತ್ತು 9 ರ ದಾಖಲೆಗಳನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.